# ಕನ್ನಡ ಕಾವ್ಯಗಳಲ್ಲಿ ಸ್ತ್ರೀಸಂವೇದನೆ

**ಕರಿಬಸಣ್ಣ.ಟಿ.**

ಸಹಾಯಕ ಪ್ರಾಧ್ಯಾಪಕರು.
ಸ ಪ್ರ ದ ಕಾ. ತುಮಕೂರು

ಪ್ರಾಚೀನ ಭಾರತೀಯ ಪರಂಪರೆಯಲ್ಲಿ ಸಾಹಿತ್ಯ ಕಲೆಗಾಗಿ ಕಲೆ ಎನ್ನುವ ಅರ್ಥದಲ್ಲಿ ಪ್ರಕಟಗೊಂಡರೂ ಅದು ಮತಧರ್ಮದ ಪ್ರಸಾರಕ್ಕಾಗೇ, ಉಳ್ಳವರ ತಲೆಯ ಕಸುವಾಗೇ ಬೆಳೆದುಕೊಂಡು ಬಂದಿದೆ.ಕಲೆಯ ಉದ್ದೇಶ ರಸಾನಂದವೆಂದೇ ಪ್ರತಿಪಾದಿಸುತ್ತ ಬರಲಾಗಿದೆ.ದೇಶದ ಶೇಕಡಾ ತೊಂಬತ್ತರಷ್ಟು ಜನರಿಗೆ ಸಾಹಿತ್ಯ ರಚನೆ ಅಸ್ಪೃಶ್ಯವಾಗಿತ್ತು.ತದನಂತರ ಸಾಮ್ರಾಜ್ಯಶಾಹಿಗಳು ಬದಲಾಗುವಂತೆ ಸಾಹಿತ್ಯದ ಗತಿಗಳೂ ಬದಲಾದವಾದರೂ ಭಾರತೀಯ ಸಾಹಿತ್ಯ ತನ್ನ ಮೈಕೊಡವಿಕೊಂಡು ಹೊಸ ಚಿಗುರನ್ನು ತಳೆದದ್ದು ಬ್ರಿಟಿಷರು ತಕ್ಕಡಿ ಹಿಡಿದುಕೊಂಡು ಭಾರತಕ್ಕೆ ಬಂದ ಬಳಿಕ.

ಈ ನೆಲದ ಮೂಲ ಸಂಸ್ಕೃತಿಯಾಗಿ ಹರಿದದ್ದು, ದ್ರಾವಿಡ ಸಂಸ್ಕೃತಿ ಮಾತೃಪ್ರಧಾನ ಕುಟುಂಬ ವ್ಯವಸ್ಥೆಯ ಇಲ್ಲಿ ಹೆಣ್ಣಿಗೆ ಹೆಚ್ಚಿನ ಸ್ಥಾನಮಾನಗಳು ಲಭ್ಯವಿದ್ದವು ಎಂಬುದು ಮಾತೃದೇವತೆಯ ಕಲ್ಪನೆ ಮತ್ತು ಅನೇಕ ಆಧಾರಗಳು ನಮಗಿಂದು ಸಿಗುತ್ತವೆ. ಆದರೆ ಕಾಲಾನಂತರ ಆರ್ಯರ ದಾಳಿಯ ನಂತರ ಅವರ ಸಂಸ್ಕೃತಿಯ ದಟ್ಟಡವಿಯಲ್ಲಿ ಹೆಣ್ಣು ಅಸ್ಪೃಶ್ಯಳಾದಳೆಂಬುದಕ್ಕೆ ಇತಿಹಾಸದಲ್ಲಿ ಸಾಕಷ್ಟು ನಿದರ್ಶನಗಳು ಸಿಗುತ್ತವೆ.

"ಸ್ತ್ರೀಯರು ತತ್ವಶಾಸ್ತ್ರವನ್ನು ಎಂದೂ ಅಭ್ಯಸಿಸಬಾರದು,

ವೈವಾಹಿಕ ನಿಯಮಗಳನ್ನು ಪಾಲಿಸುವುದೇ ಅವರಿಗೆ

ಹೆಚ್ಚಿನ ತತ್ವ" – ಯುರೋಪಿನ ಧರ್ಮಬೋಧಕ.

"ಜ್ಞಾನವು ಪುರುಷನ ಗೌರವವನ್ನು ಹೆಚ್ಚಿಸಿದರೆ

ಅಜ್ಞಾನವು ಸ್ತ್ರೀಯರ ಸೌಂದರ್ಯವನ್ನು ಹೆಚ್ಚಿಸುವುದು. – ಚೀನಿ ಗಾದೆ.

ನ ಸ್ತ್ರೀ ಸ್ವಾತಂತ್ರ್ಯಮರ್ಹತಿ" – ಮನು

ಹಿಂದೂ ಧರ್ಮದಲ್ಲಿ ಶೂದ್ರ ಕೀಳು ಮಾನವನಾದರೆ, ಸ್ತ್ರೀ ನೀಚಳಾಗಿದ್ದಾಳೆ.ಇದರಿಂದಾಗಿ ಸ್ತ್ರೀ ಹಿಂದೂ ಸಮಾಜದಲ್ಲಿ ಶೂದ್ರರಿಗಿಂತ ಹೆಚ್ಚಿನ ತುಚ್ಛೀಕರಣಕ್ಕೆ ಗುರಿಯಾಗಿದ್ದಾಳೆ.

ಸಾವಿರಾರು ವರ್ಷಗಳಿಂದ ಮಹಿಳೆ ಅಸ್ಪೃಶ್ಯಳಾಗಿ, ಮಹಾಸತಿ(ಮಾಸ್ತಿ)ಯಾಗಿ, ಭೋಗದ ವಸ್ತುವಾಗಿ, ಒಡವೆಯಾಗಿ, ಗಂಡಿನ ಕಣ್ಣಿಗೆ ಸಂತೋಷ ನೀಡುವ ನಾಟ್ಯರಾಣಿಯಾಗಿ, ಬಸವಿಯಾಗಿ, ದೇವದಾಸಿಯಾಗಿ, ಸಾಲದೆಂಬಂತೆ ಸೂಳೆಯಾಗಿ ಶೋಷಣೆಗೊಳಗಾಗಿದ್ದನ್ನು ಸ್ಪಷ್ಟವಾಗಿ ಕಾಣುತ್ತೇವೆ. ಈ ವ್ಯವಸ್ಥೆಯ ಹಿಂದಿನ ಶಕ್ತಿಗಳಾವವು ಎಂಬುದನ್ನು ಸರಳವಾಗಿ ಹೇಳುವಂತಿಲ್ಲ.

ದುಡಿವ ವರ್ಗದ ಮಹಿಳೆಯರಿಗೆ ಗೃಹ ಬಂಧನದ ಹೊರತಾಗಿ ಬೇರೆ ಸಾಂಸ್ಕೃತಿಕ ರಂಗಗಳ ಪರಿಚಯವಾಗದಂತೆ ಪುರುಷ ಸಂಸ್ಕೃತಿ ತನ್ನ ಬಲವಾದ ಕೋಟೆಯನ್ನು ರಚಿಸಿಕೊಂಡು ಬಂದಿತ್ತು.ಆದರೂ ಮಧ್ಯಮ ವರ್ಗದ ಸಮಾಜದ ವಿಶೇಷ ಅರ್ಹತೆಯ ಮಹಿಳೆಯರು ಈ ಸೀಮಿತ ಬಂಧನದ ಲಕ್ಷ್ಮಣರೇಖೆ ದಾಟಿ ಗೃಹ ಬಂಧನವೊಂದನ್ನು ತಮ್ಮ ಧ್ಯೇಯವನ್ನಾಗಿಸಿಕೊಳ್ಳದೆ ಸಂದರ್ಭ ಬಂದಾಗ ಕೈಯಲ್ಲಿ ಕತ್ತಿ ಹಿಡಿದು ದುಷ್ಟರನ್ನು ಸದೆಬಡಿಯುವ ಶಿಷ್ಟರಕ್ಷಣೆ ಧರ್ಮಕಾರ್ಯವನ್ನೆಸಗಿರುವ ಬೆಲೆಯುಳ್ಳ ಉದಾಹರಣೆಗಳು ದೊರಕುತ್ತವೆ.

ನಿಜವಾದ ಶ್ರಮಜೀವನ ಅನಾದಿ ಕಾಲದಿಂದಲೂ ಹೆಣ್ಣಿನದೇ ಆದರೂ ಹೆಣ್ಣಿನ ಪ್ರಜ್ಞೆಯನ್ನು ಸೀಮಿತ ಹೊಸ್ತಿಲೊಳಗೆ ಕಟ್ಟಿ ಹಾಕಿ ಅವಳ ಬದುಕಿನ ವಿಕಸನವನ್ನು ಹೊಸಕಿ ಹಾಕುವ ತಂತ್ರವು ಶಾಸನಗಳಲ್ಲಿ ಪ್ರಧಾನವಾಗಿದೆ. ಹೀಗಾಗಿ ಕೆಲವರನ್ನು ಬಿಟ್ಟು ಉಳಿದ ಸಾಮಾನ್ಯ ಸ್ತ್ರೀ ಸಮುದಾಯವನ್ನು ಆಡಳಿತ, ಉದ್ಯೋಗ, ಶಿಕ್ಷಣ, ನೀತಿ, ಕಾನೂನು ಮುಂತಾದ ಪುರುಷ ವ್ಯವಸ್ಥೆಯಲ್ಲಿ ತುಳಿಯುತ್ತಲೆ ಬಂದಿದೆ.

ಈ ರೀತಿ ಪುರುಷ ವ್ಯವಸ್ಥೆ ಹೆಣ್ಣನ್ನು ತುಳಿಯುತ್ತ ಬಂದಿದ್ದರೂ, ಅದಕ್ಕೆ ಪರ್ಯಾಯವಾಗಿ ಮಹಿಳೆ ವಿರೋಧ ವ್ಯಕ್ತಪಡಿಸಿದ್ದು, ಬಂಡಾಯವೆದ್ದದ್ದು ತೀರಾ ಇತ್ತೀಚೆಗೆ ಅಂದರೆ 12ನೆಯ ಶತಮಾನದಲ್ಲಿ ದೀರ್ಘ ಕಾಲದಿಂದ ಸ್ವರೂಪ ವಿಸ್ಮೃತಿಗೊಂಡಿದ್ದ ಆಕೆಯನ್ನು ಜಾಗೃತಗೊಳಿಸಿದವರು ಶರಣರು, ಮೂಲತಃ ಧಾರ್ಮಿಕ ಕ್ರಾಂತಿಯಾಗಿದ್ದರೂ, ಆ ಮೂಲಕ ಸಮಾಜದ ಶೈಥಿಲ್ಯಕ್ಕೆ

ಕಾರಣವಾಗಿದ್ದ ಜಾತಿಭೇದ, ಲಿಂಗಭೇದ, ವರ್ಗಭೇದ, ವೃತ್ತಿಭೇದಗಳನ್ನು ತೊಡೆದು ಹಾಕಿ ಮಾನವೀಯತೆಯನ್ನು, ಏಕತೆಯನ್ನು ನೆಲೆಗೊಳಿಸುವುದೇ ಅವರ ಉದ್ದೇಶವಾಗಿದ್ದು, ಅಂತೆಯೆ ಅಲ್ಲಿಯವರೆಗೆ ಶೂದ್ರ ಸಮಾನಳೆಂದು ಪರಿಗಣಿಸಲ್ಪಟ್ಟ ಸ್ತ್ರೀಗೆ ಸಾಮಾಜಿಕ, ವ್ಯವಹಾರ, ಧಾರ್ಮಿಕ ಆಚರಣೆ, ಆಧ್ಯಾತ್ಮಿಕ ಸಾಧನೆಗಳಲ್ಲಿ ಸ್ವಾತಂತ್ರ್ಯ ಸಮಾನತೆಗಳನ್ನು ಕಲ್ಪಿಸಿಕೊಟ್ಟರು.ಶರಣರು ತೋರಿದ ಇಂತಹ ಉದಾರ ಧೋರಣೆಯಿಂದಾಗಿ ಮಹಿಳೆ ಬಹುಕಾಲದ ಬಂಧನದಿಂದ ಹೊರಬಂದು ತನ್ನತನವನ್ನು ಸ್ತ್ರೀಧರ್ಮದ ಮೇಲ್ಮೈಯನ್ನು ಸಾರುವ ಪ್ರಯತ್ನ ಮಾಡಿದಳು.

ಜಾತಿ, ಮತ, ಪಂಥಗಳನ್ನು ಮರೆತು ಸಾಮಾಜಿಕ ಕಟ್ಟುಪಾಡುಗಳನ್ನು ಬದಿಗೊತ್ತಿ, ಅನುಭವ ಮಂಟಪದ ಪರಿಸರದಲ್ಲಿ ತಮ್ಮ ಬೌದ್ಧಿಕ, ಆಧ್ಯಾತ್ಮಿಕ, ಬೆಳವಣಿಗೆಯನ್ನು ಕಂಡುಕೊಂಡ ಶರಣೆಯರು, ತಮಗೆ ದೊರೆತ ವ್ಯಕ್ತಿ ಸ್ವಾತಂತ್ರ್ಯ, ಅಭಿವ್ಯಕ್ತಿ, ಸ್ವಾತಂತ್ರ್ಯವನ್ನು ಸಾರ್ಥಕ ಪಡಿಸಿಕೊಂಡರು. ಸಾಮಾಜಿಕ, ತಾತ್ವಿಕ ವಿಷಯಗಳ ಬಗೆಗೆ ಚಿಂತನೆ ನಡೆಸುವುದರೊಂದಿಗೆ ಸ್ತ್ರೀಪರ ವಾದವನ್ನು ಸಮರ್ಥಿಸಿದರು. ಹೆಣ್ಣು ಅಬಲೆಯಲ್ಲ, ಪೂರ್ಣ ಅವಕಾಶ ದೊರೆತರೆ ಆಕೆ ಯಾವುದೇ ಕ್ಷೇತ್ರದಲ್ಲಿ ಮೇಲುಗೈ ಸಾಧಿಸಬಲ್ಲಳೆಂಬುದನ್ನು ಬದುಕಿ ತೋರಿದರು. ಕೆಳಸ್ತರದಿಂದ ಬಂದವರೂ ಸೇರಿದಂತೆ ಸುಮಾರು ಐವತ್ತಕ್ಕಿಂತ ಹೆಚ್ಚು ಜನ ಮಹಿಳೆಯರು ಏಕಕಾಲಕ್ಕೆ ಸಮಾನ ವೇದಿಕೆಯ ಮೇಲೆ ಸೇರಿ ತಮ್ಮ ವಿಚಾರಗಳನ್ನು ನಿರ್ಭೀತಿಯಿಂದ ಅಭಿವ್ಯಕ್ತಪಡಿಸಿದರು. ಪ್ರಪಂಚದ ಇತಿಹಾಸದಲ್ಲಿಯೇ ಇದೊಂದು ಅಪೂರ್ವ ಮಹಿಳಾ ಸಂಘಟನೆ.

ಹೆಣ್ಣಿನ ರೂಪ ಕಂಡು ಅರಸಿ ಬಂದವರಿಗೆ ಅಕ್ಕ ಕೊಟ್ಟ ಉತ್ತರ ಸ್ತ್ರೀ ವಾದದ ಮುನ್ನುಡಿ ಎಂದರೂ ತಪ್ಪಾಗಲಾರದು.

**"ಬಟ್ಟಿಹ ಮೊಲೆಯ ಭರದ ಜವ್ವನದ ಚೆಲವು ಕಂಡು ಬಂದಿರಣ್ಣಾ**

**ಅಣ್ಣಾ ನಾನು ಹೆಂಗಸೂ ಅಲ್ಲ, ಅಣ್ಣಾ ನಾನು ಸೂಳೆಯಲ್ಲ!**

**ಅಣ್ಣಾ, ಮತ್ತೆ ನನ್ನ ಕಂಡು ಕಂಡೂ ಆರೆಂದು ಬಂದಿರಣ್ಣಾ!**

**ಚೆನ್ನಮಲ್ಲಿಕಾರ್ಜುನನಲ್ಲದ ಮಿಕ್ಕಿನ ಪುರುಷನು**

**ನಮಗಾಗದ ಮೋರೆ ನೋಡಿರಣ್ಣಾ"**

(ಶಿವಶರಣೆಯರ ವಚನೆಗಳು – ಸಂ.ಆರ್.ಸಿ. ಹಿರೇಮಠ–ಪು–399)

ಪುರುಷನಷ್ಟೇ ಅಲ್ಲ ಒಬ್ಬ ಮಹಿಳೆ ಕೂಡಾ ಸಾಮಾಜಿಕ ಜೀವನದಲ್ಲಿ ಇದ್ದು, ಅಲ್ಲಿನ ಸಂಕೀರ್ಣತೆ, ಸಂಘರ್ಷಗಳಿಗೆ ಹೇಗೆ ಎದೆಯೊಡ್ಡಿ ನಿಲ್ಲಬೇಕು ಎಂಬುದನ್ನು ಅಕ್ಕ ಕಲಿಸಿಕೊಡುತ್ತಾಳೆ.

ಕಿನ್ನರ ಬೊಮ್ಮಯ್ಯ ಅಕ್ಕಮಹಾದೇವಿಯನ್ನು ಕಂಡು ಅವರ ದೇಹಕ್ಕೆ ಆಸೆಪಟ್ಟು ವರ್ತಿಸಿದ ರೀತಿ ಆತಂಕಕಾರಿ, ಮುಂದೆ ಅದಕ್ಕೆ ಅಕ್ಕಮಹಾದೇವಿ ಹೇಳುವ ಮಾತುಗಳು ಅವಳ ದಿಟ್ಟ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ.ಅದು ಸ್ತ್ರೀವಾದದ ಶ್ರೇಷ್ಠ ಸಂದರ್ಭವೂ ಹೌದು.

ಜಗತ್ತಿನಲ್ಲೇ ಮಹಿಳಾವಾದವನ್ನು ಹೂಡಿದ, ಹೋರಾಟದ ಕಿಚ್ಚನ್ನು ಹತ್ತಿಸಿದ, ಬಂಡಾಯದ ಮನೋಧರ್ಮವನ್ನು ಬಿತ್ತಿದ ಮೊದಲ ಮಹಿಳೆ ಕನ್ನಡದ ಅಕ್ಕಮಹಾದೇವಿ ಎಂದು ನಾನು ಭಾವಿಸುತ್ತೇನೆ.

ಹೀಗೆ ವಚನ ಚಳುವಳಿಯಲ್ಲಿ ಸಾಮಾಜಿಕ ಕಟ್ಟು ಕಟ್ಟಳೆಗಳಿಂದ ಮುಕ್ತವಾಗುವ ತೀವ್ರತೆಯ ಆಶಯದ ಜೊತೆಗೆ ನಿಯಮಗಳನ್ನು ಮುರಿಯುವ ಬಗೆಯೂ ವ್ಯಕ್ತವಾಗಿದೆ.ಆದರೆ ವಚನ ಚಳುವಳಿಯ ನಂತರ ನಮಗೆ ಮತ್ತೆ ಮಹಿಳಾ ವಾದಗಳು ಕಂಡು ಬರುವುದು ಆಧುನಿಕ ಕನ್ನಡ ಸಾಹಿತ್ಯದಲ್ಲಿ.ಅದರಲ್ಲೂ ಗಟ್ಟಿಯಾದ ಧ್ವನಿ ಕಂಡು ಬಂದದ್ದು, ದಲಿತ ಬಂಡಾಯ ಸಾಹಿತ್ಯದಲ್ಲಿ ಅದರ ಮುಂಚೆ ಅಂದರೆ ನವೋದಯ, ಪ್ರಗತಿಶೀಲ, ನವ್ಯ ಕಾಲಘಟ್ಟದಲ್ಲಿ ಮಹಿಳಾ ಬರವಣಿಗೆ ಬಂದರೂ ಅದರಲ್ಲಿ ಹೆಣ್ಣಿನ ನೋವು, ನರಳಾಟ, ತಲ್ಲಣಗಳ ಬಗ್ಗೆ ಮೂಡಿ ಬಂದಿದೆ.ಈ ಮೇಲಿನ ಅಂಶಗಳು ಅತಿ ಹೆಚ್ಚು ಕಂಡು ಬರುವುದು ಆ ಕಾಲಘಟ್ಟದ ಕಥೆ, ಕಾದಂಬರಿಗಳಲ್ಲಿ.ಇಲ್ಲಿ ಪುರುಷ ವ್ಯವಸ್ಥೆಯ ವಿರುದ್ಧದ ಆವೇಶ ಆಕ್ರೋಶಗಳು ತೀರ ಕಡಿಮೆ.

ನವೋದಯ ಕಾಲಘಟ್ಟದಲ್ಲಿ ಸ್ತ್ರೀ ಶಿಕ್ಷಣ, ವಿಧವಾ ವಿವಾಹ, ಪ್ರೇಮ ಸಂಯೋಗ, ದಾಂಪತ್ಯ ಧರ್ಮ, ಸ್ತ್ರೀ ಆದರ್ಶ ಮುಂತಾದ ಆಲೋಚನೆಗಳು ಕಂಡು ಬರುವುದು.ನವೋದಯದ ಕಥೆ, ಕಾದಂಬರಿಗಳಲ್ಲಿ ಕೊಡಗಿನ ಗೌರಮ್ಮ, ಆರ್.ಕಲ್ಯಾಣಮ್ಮ, ಶ್ಯಾಮಾಲಾದೇವಿ, ಕಾರಂತ, ಬೇಂದ್ರೆ, ಮುಂತಾದವರಲ್ಲಿ ಈ ಅಂಶಗಳನ್ನು ಗುರುತಿಸಬಹುದು.

ಪ್ರಗತಿಶೀಲ ಚಳವಳಿಯ ಸಂದರ್ಭದಲ್ಲಿ ಬರೆಯತೊಡಗಿದ ಎಂ.ಕೆ.ಇಂದಿರಾ, ತ್ರಿವೇಣಿ, ಅನುಪಮಾ ನಿರಂಜನ ಮೊದಲಾದವರು ತಳೆಯುವ ಸ್ತ್ರೀಪರವಾದ ದೃಷ್ಟಿಕೋನವು ಒಟ್ಟು ಪರಿಸ್ಥಿತಿಯಿಂದ ಬಿಡುಗಡೆ ಎನ್ನುವ ಅರ್ಥವನ್ನು ಪಡೆದುಕೊಂಡಿತು. ಈ ಕಾಲಘಟ್ಟದಲ್ಲಿ ಮಧ್ಯಮ ವರ್ಗದಲ್ಲಿ ಹುಟ್ಟಿಕೊಳ್ಳುವ ವಿಷಾದ, ಕರುಣೆ ಮೊದಲಾದವುಗಳು ಪ್ರತಿಭಟನಾತ್ಮಕ ನೆಲೆಯನ್ನು ಪಡೆದುಕೊಂಡಿರುವ ಅಂಶವನ್ನು ಈ ವೇಳೆಯ ಕಾದಂಬರಿಗಳಲ್ಲಿ ಕಾಣಬಹುದು.ಉದಾ: ತ್ರಿವೇಣಿಯವರ 'ಬೆಕ್ಕಿನ ಕಣ್ಣು' ಕಾದಂಬರಿಯಲ್ಲಿ ಕಂಡು ಬರುವ ಮಾನಸಿಕ ಪರಿಣಾಮಗಳು ಓದುಗರಲ್ಲಿ ಕರುಣೆ ಹುಟ್ಟಿಸಿದರೆ, ಇಂದಿರಾ ಅವರ 'ಫಣಿಯಮ್ಮ' ಕಾದಂಬರಿ ಫಣಿಯಮ್ಮ ಪಾತ್ರದ ಮೂಲಕ ನಮ್ಮಲ್ಲಿ ಪ್ರತಿಭಟನೆಯ ಕಾವು ಮೂಡಿಸುತ್ತದೆ. ನವ್ಯ ಕಾಲಘಟ್ಟವೂ ಕೂಡಾ ನನಗೆ ಈ ಎರಡು ಕಾಲಘಟ್ಟಗಳಿಗಿಂತ ವಿಭಿನ್ನವಾಗಿ ಕಾಣುವುದಿಲ್ಲ.

ಮಹಿಳಾವಾದ, ಮಹಿಳಾ ಹೋರಾಟ, ಮಹಿಳಾ ಬಂಡಾಯ ಹಾಗೂ ಸ್ತ್ರೀ ಪ್ರತಿಭೆಯ ವಿವಿಧ ಮಗ್ಗುಲುಗಳು ತೆರೆದುಕೊಂಡದ್ದು 1970ರ ನಂತರ ಅಂದರೆ ದಲಿತ ಬಂಡಾಯ ಸಾಹಿತ್ಯದಲ್ಲಿ.

ಯಜಮಾನ ಸಂಸ್ಕೃತಿಯ ಸೋಗಲಾಡಿತನ, ಶತಮಾನಗಳಿಂದ ನಡೆದ ಶೋಷಣೆ, ಸಾಮಾಜಿಕ ಅಸಮಾನತೆ, ವರದಕ್ಷಿಣೆ ಕಿರುಕುಳ, ನಿರುದ್ಯೋಗ ಸಮಸ್ಯೆ, ಅಡ್ಡಗಟ್ಟಿದ ಜಾತಿ ಗೋಡೆಗಳು, ನಂಬಿಕೆ ಆಚರಣೆಗಳು, ಸಂಪ್ರದಾಯಗಳು, ಇವೆಲ್ಲಾ ಇಂದಿನ ಮಹಿಳೆಯನ್ನು ಕಾಡುತ್ತಿವೆ. ಅಂತೆಯೇ ಈ ಎಲ್ಲಾ ಸಮಸ್ಯೆಗಳನ್ನು ಪ್ರತಿಭಟಿಸಿ ನಿಂತು ತನ್ನ ಬದುಕನ್ನು ಕಂಡುಕೊಳ್ಳುವುದು ಇಂದಿನ ಮಹಿಳೆಗೆ ಸವಾಲಾಗಿದೆ.

ಈ ಮೇಲೆ ಕಂಡು ಬರುವ ಸಮಸ್ಯೆಗಳನ್ನು ಮೆಟ್ಟಿ ನಿಲ್ಲುವ ಸಂದರ್ಭವನ್ನು ತಮ್ಮ ಕಾವ್ಯಗಳ ಮುಖೇನ ಈ ಕೆಳಗಿನ ಲೇಖಕಿಯರು ನಿರ್ಮಾಣ ಮಾಡಿದರು.ಅವರೆಂದರೆ ವೈದೇಹಿ, ಶೈಲಜಾ ಉಡಚಣ, ಮಾಲತಿ ಪಟ್ಟಣಶೆಟ್ಟಿ, ಕಮಲಾ ಹೆಮ್ಮಿಗೆ, ವಿಜಯಾದಬ್ಬೆ, ಬಿ.ಟಿ. ಲಲಿತಾನಾಯಕ, ಸ.ಉಷಾ, ಹೇಮಾ ಪಟ್ಟಣಶೆಟ್ಟಿ, ಸವಿತಾ ನಾಗಭೂಷಣ, ಮಲ್ಲಿಕಾ ಘಂಟಿ, ಪ್ರತಿಭಾ ನಂದಕುಮಾರ, ಕೆ.ಷರೀಫಾ, ರೂಪಾ ಹಾಸನ, ಕವಿತಾ ರೈ, ಮೀನಾ ಸದಾಶಿವ, ನಾ. ತೇಜಶ್ರೀ, ವಿನಯ ವಕ್ಕುಂದ ಮುಂತಾದವರು.ಇವರೆಲ್ಲಾ ತಮ್ಮ ಕಾವ್ಯದ ಮೂಲಕ ಸ್ತ್ರೀವಾದವನ್ನು ಮಂಡಿಸುತ್ತಾ ಬಂದವರು.

ಬಂಡಾಯ ಕವಯಿತ್ರಿಯರು ನಿಸ್ಸಂಕೋಚವಾಗಿ, ನೇರವಾದ ಅಭಿವ್ಯಕ್ತಿಯಲ್ಲಿ ತಮ್ಮ ಅಂತರಂಗವನ್ನು ನಿರ್ಭೀಡೆಯಿಂದ ತೆರೆದಿಡುತ್ತಾರೆ.ನಮ್ಮ ಸಾಮಾಜಿಕ ಪರಿಸರ ಪುರುಷ ಪ್ರಪಂಚವೇ ಆಗಿದ್ದು ಮತ್ತು ಹೆಣ್ಣಿನ ಸ್ಥಾನಮಾನ ಸ್ಥಿತಿಗತಿಗಳ ಬಗ್ಗೆ ಅವರಿಗೆ ಪರಿಜ್ಞಾನವಿರುವುದು ಸ್ಪಷ್ಟವಾಗಿ ಗೋಚರವಾಗುತ್ತದೆ.

ಪುರುಷ ಪ್ರಧಾನ ವ್ಯವಸ್ಥೆಯನ್ನು ಪ್ರಾತಿನಿಧಿಕವಾಗಿ ಸಂಕೇತಿಸುವ ತಂದೆ, ಪ್ರಿಯಕರ, ಗಂಡ, ಮಗ, ರಾಜಕಾರಣಿಗಳು, ಮಠಾಧಿಪತಿಗಳು ಒಟ್ಟಾರೆ ಸಮಾಜದ ವಿವಿಧ ರೀತಿಯ ಪುರುಷರನ್ನು ಬಂಡಾಯ ಮಹಿಳಾ ಕಾವ್ಯ ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದೆ. ಹಾಗೆ ಅವರ ವ್ಯವಸ್ಥೆಯನ್ನು ಅವರ ದೃಷ್ಟಿಕೋನವನ್ನು ಪ್ರತಿಭಟಿಸಿದೆ.

"ಬಸುರಿ ಸೀತೆಯ ಅಗ್ನಿಯಂಥ ಅಡವಿಗೆ ಅಟ್ಟಿದ್ದು ಪ್ರಜೆಗಳಿಗಾಗಿ,
ಗಂಡರೈವರು ಹೆಂಡತಿಯ ಪಣಕ್ಕಿಟ್ಟಿದ್ದು ಧರ್ಮಕ್ಕಾಗಿ
ಬುದ್ಧ ಮಧ್ಯರಾತ್ರಿಯಲ್ಲೆದ್ದು ಹೆಂಡತಿ ಬಿಟ್ಟು ಹೋಗಿದ್ದು
ಜ್ಞಾನೋದಯಕ್ಕಾಗಿ"

'ಹೀಗೆಂದವರು' ಎನ್ನುವ ಕವಿತೆ ಹೇಮಾ ಪಟ್ಟಣಶೆಟ್ಟಿ ಅವರು ಸಂಪಾದಿಸಿರುವ 'ಅನುಲೇಖ' ಎಂಬ ಕೃತಿಯಲ್ಲಿದೆ.ಈ ಕವಿತೆಯನ್ನು ಬರೆದಿರುವ ಮಲ್ಲಿಕಾಘಂಟಿ ಅವರು ಸ್ತ್ರೀಯರನ್ನು ತಮ್ಮ ಸ್ವಾರ್ಥಕ್ಕಾಗಿ ಬಲಿಕೊಡುವ ಪುರುಷ ವ್ಯವಸ್ಥೆಯನ್ನು ಪ್ರಶ್ನಿಸುತ್ತಾರೆ.

ಅವರ ರೊಟ್ಟಿ ಮತ್ತು ಹುಡುಗಿ ಕವನ ಸಂಕಲನದಲ್ಲಿರುವ 'ಹೆಣ್ಣು' ಎನ್ನುವ ಕವಿತೆ ಪುರುಷ ತನಗೆ ಹೇಗೆ ಬೇಕೋ ಹಾಗೆ ಸರಕಾಗಿ, ವಸ್ತುವಿನ ರೀತಿಯಲ್ಲಿ ಕಾಣುವುದನ್ನು ತೀವ್ರವಾಗಿ ಖಂಡಿಸುತ್ತದೆ.

"ಹೆಣ್ಣು ಚಪ್ಪಲಿ
ಎಂದರು ಬೇಕೆಂದಾಗ
ತಲೆಯ ಮೇಲಿಟ್ಟುಕೊಂಡು
ಮೆರವಣಿಗೆ ಗೈದರು
ಬೇಡವೆಂದಾಗ
ಬಾಗಿಲ ಹೊರಗಿಟ್ಟು

ಅನಿಷ್ಟವೆಂದು

ಅಸಹ್ಯ ಪಟ್ಟರು?

ಹೆಣ್ಣನ್ನು ಶತಶತಮಾನಗಳಿಂದ ಅನಿಷ್ಟವೆಂದು ಹೀಗಳೆಯುತ್ತಾ ಬಂದ ಪುರುಷ ವ್ಯವಸ್ಥೆಯ ಬಗೆಗೆ ಈ ಕವಿತೆಯಲ್ಲಿ ಆಕ್ರೋಶವಿದೆ.

ಬಂಡಾಯ ಕವಯಿತ್ರಿ ಎಚ್.ಎಲ್.ಪುಷ್ಪ ಅವರ ಕಾವ್ಯಗಳಂತೂ ಸ್ತ್ರೀ ಪರವಾಗಿ ಮಾತಾಡುತ್ತಲೇ ಸ್ತ್ರೀಗೊಂದು ಎಚ್ಚರ ಅಥವಾ ಜಾಗೃತಿಯ ಸಂದೇಶವನ್ನು ರವಾನಿಸಿದವು. ಅವರ 'ಅಮೃತಮತಿಯ ಸ್ವಗತ' ಕವನವು, ಜನ್ನನ 'ಯಶೋಧರ ಚರಿತೆ'ಯ ಅಮೃತಮತಿಯ ಪಾತ್ರವನ್ನು ನೆನಪಿಗೆ ತರುತ್ತಾ, ಆ ಪಾತ್ರಕ್ಕೆ ಅಂಟಿಕೊಂಡು ಬಂದಿದ್ದ 'ಪಾಪದ ಕೆಲಸ' ಎಂಬ ಅಪವಾದವನ್ನು ಕಿತ್ತು ಹಾಕಿ, ಅದು ಹೆಣ್ಣಿನ ಸಹಜ ಹಂಬಲ, ಅವಳ ತುಮುಲಗಳನ್ನು ಹೊರಹಾಕುತ್ತದೆ.

"ಮೈಯ ವಾಸನೆಗೆ ಜನ್ಮಾಂತರಗಳಿಲ್ಲ

ಬಂಧವಿಲ್ಲ ಈ ಪಾಡುಗಳಿಗೆ

ಹೊರುವ ಪಾಪಗಳಿಲ್ಲ

ಹಸಿವಿನೆದುರು ಏನಿಲ್ಲ, ಏನೆಲ್ಲ ಭೀತಿ

ಕತ್ತಿಯು ಕೂಡ ಅಳುಕುತ್ತದೆ

ಕಂಪಿಸುತ್ತಿದೆ ಧರ್ಮದ ಸೂಕ್ಷ್ಮ ಜಂಜಾಟದಲ್ಲಿ

ನಾವು ಜನ್ಮವೆತ್ತುತ್ತಲೇ ಇದ್ದೇವೆ

ಅಮೃತಮತಿಯರಾಗಿ"

ಶಶಿಕಲಾ ವೀರಯ್ಯಸ್ವಾಮಿ ಅವರ 'ಮನುಷ್ಯರಿದ್ದಾರೆ ಎಚ್ಚರಿಕೆ' ಎನ್ನುವ ಕವಿತೆಯಲ್ಲಿ ಹೆಣ್ಣನ್ನು ನಯನಾಜೂಕಿನಿಂದಲೇ ತೇಜೋವಧೆ ಮಾಡುವ ಪುರುಷರನ್ನು ತಾಯಿ ಗಂಡರು ಎಂದು ಕರೆಯುತ್ತಾರೆ.ಹಾಗೆಯೇ ಅಂತಹ ಪುರುಷ ವ್ಯವಸ್ಥೆಯೊಟ್ಟಿಗೆ ಎಚ್ಚರಿರಬೇಕೆಂಬ ಕರೆ ಕೊಡುತ್ತಾರೆ.

"ನಮ್ಮಲ್ಲಿ ಮನುಷ್ಯರಿರುವುದೇ ಹೀಗೆ

ನೆನಪಾದರೆ ಮೈ ಜುಮ್ಮೆನ್ನುವ ಹಾಗೆ

ನೆರಮನೆಗೆ ಬೆಂಕಿ ಬಿದ್ದರೆ, ಮೈ ಕಾಯಿಸಿ ಬೀಡಿ ಹಚ್ಚೋ

ಕೇಡಿಗರು! ಉಂಡ ಗಂಗಾಳದಲ್ಲೇ ಉಚ್ಚಿ ಹೊಯ್ದು

ಭಂಡತನಾ ಮೆರೆಸೋ ತಾಯಿಗಂಡರು"

ಹೀಗಾಗಲೇ ಇತಿಹಾಸದಲ್ಲಿ ಹೆಣ್ಣಿನ ಮೇಲೆ ಕ್ರೌರ್ಯವೆಸಗಿದವರ ಕತೆ ಏನಾಗಿದೆ ಎನ್ನುವುದು ಪುರುಷನಿಗೆ ಗೊತ್ತು.ಆದರೂ ಅವರು ಬದಲಾಗುತ್ತಿಲ್ಲ. ಅದಕ್ಕಾಗಿಯೇ ಕವಯಿತ್ರಿ ಸುಕನ್ಯಾ ಮಾರುತಿ ತಮ್ಮ 'ಕಲಕೇರಿಗಳಿಗೆ' ಎಂಬ ಕವನದಲ್ಲಿ ಮತ್ತೊಮ್ಮೆ ಅದನ್ನು ನೆನಪಿಸುತ್ತಾರೆ.

"ತೊಡೆ ಮುರಿದಿದ್ದೇವೆ

ಗುಂಡಿಗೆ ಬಗೆದು ರಕ್ತ ಹೀರಿದ್ದೇವೆ

ಕರುಳ ಮಾಲೆ ಮುಡಿದಿದ್ದೇವೆ

ತಾಯ್ಗಂಡರೇ ನಾವು ನೋಡುತ್ತೇವೆ

ತಾಯಿ ಭೂಮಿ ಮುನಿದಾಗ ನಿಮ್ಮನ್ನು ಯಾರು ರಕ್ಷಿಸುತ್ತಾರೆಂದು"

ಹೆಣ್ಣೆಂಬ ಮಾತ್ರಕ್ಕೆ ಅವಳನ್ನು ಅವಮಾನೀಕರಿಸಿದ್ದಲ್ಲಿ ಅವಳು ದುರ್ಗೆಯಾಗುತ್ತಾಳೆ. 'ನಾರಿ ಮುನಿದರೆ ಮಾರಿ' ಎನ್ನುವ ಮಾತು ನೆನಪಿರಲಿ ಎನ್ನುತ್ತಾ ಪುರುಷ ಸಮಾಜಕ್ಕೆ ಎಚ್ಚರಿಕೆ ನೀಡುತ್ತಾಳೆ.

ಇದೆ ರೀತಿ ಪುರುಷರನ್ನು ಕಂಡರೆ 'ಜಾಡಿಸಿ ಒದಿಬೇಕು' ಎನ್ನುವ ಆಸೆಯನ್ನು ಚ.ಸರ್ವಮಂಗಳ ತಮ್ಮ 'ಭಂಡರು' ಕವಿತೆಯಲ್ಲಿ ವ್ಯಕ್ತ ಮಾಡುತ್ತಾರೆ.

"ಅಯ್ಯಾ ನನಗೊಂದು ಆಸೆ

ಹಾಗೆ–ಹೀಗೆ

ಹೆಣ್ಣ ಬುಗುರಿಯಾಡಿಸುವ

ಇವುಗಳ ಕುಂಡಿಗೆ

ಒಮ್ಮೆಯದಾರೂ ಜಾಡಿಸಿ ಒದಿಬೇಕು"

ಪಾರಂಪರಿಕೆ ಸಂಪ್ರದಾಯಗಳ ಹಿಡಿತಕ್ಕೆ ಸಿಕ್ಕು ನರಳಿದ ಹೆಣ್ಣು ಕೊನೆಗೆ ಅವುಗಳನ್ನು ಮೀರಿ ನಿಲ್ಲುವ ಪ್ರಯತ್ನವನ್ನು ಬಹುದೊಡ್ಡ ಪ್ರತಿರೋಧ ಎನ್ನಬಹುದು.ತನ್ನ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ಪ್ರತಿಭಟಿಸುತ್ತಾಳೆ.

"ನೋವು ಹಿಂಸೆ ಸಹಿಸಿಕೊಂಡೆವು

ಕುಡಿತ ಹೊಡೆತ ಸಹಿಸಿಕೊಂಡೆವು

ಬೈಗುಳ ಅಪಮಾನದಲಿ ದಹಿಸಿಕೊಂಡೆವು

ಸೀಮೆಎಣ್ಣೆ ಸುರಿದು ಬೆಂಕಿಯಿಟ್ಟಾಗ

ತಾಳದೆ ಝಳ ಕೂಗಿಕೊಂಡೆವು

ಆತ್ಮಗಳು ತಿರುಗಿ ನಿಂತು ಕೇಳಿದೆವು

ತಾಳೋದಂದ್ರೆ ಎಲ್ಲಿ ತನಕ"

ಎಂದು ಕವಯಿತ್ರಿ ಕೆ. ಷರೀಫಾ ತಮ್ಮ "ತಿರುಗಿನಿಂತ ಆತ್ಮಗಳು" ಎನ್ನುವ ಕವಿತೆಯಲ್ಲಿ ಪ್ರಶ್ನಿಸುತ್ತಾರೆ. ಸದಾ ನೋವಿನಲ್ಲೇ ಹುಟ್ಟಿ ನೋವಿನಲ್ಲೇ ಕೊನೆಗಾಣುವ ಮಹಿಳೆಯ ಸ್ಥಿತಿಯನ್ನು ವಿವರಿಸುವ ಕವಿತೆ ತನ್ನ ಮೇಲಿನ ಆ ಶೋಷಣೆಯನ್ನು ಪ್ರಶ್ನಿಸುವ ಮಟ್ಟಿಗೆ 'ತಾಳೋದಂದ್ರ ಎಲ್ಲಿ ತನಕ' ಎಂಬ ಪ್ರತಿರೋಧದ ನಿಲುವನ್ನು ತಾಳಿದೆ.

ಮಹಿಳೆಯ ಶೋಷಣೆಯ ಸೃಷ್ಟಿಕರ್ತನಾದ ಆ ಮನುವನ್ನು ಅದನ್ನು ಪಾಲಿಸುತ್ತಿರುವ ಈಗಿನ ಪುರುಷ ಮೃಗವನ್ನು ಬೆಂಕಿಗೆ ಹಾಕಿ ಸುಡಬೇಕು ಎನ್ನುವ ಅಕ್ರೋಶ ಬಿ.ಟಿ.ಲಲಿತಾನಾಯಕ ಅವರ 'ಪ್ರೀತಿಸುವ ಬನ್ನಿ' ಕವಿತೆಯಲ್ಲಿ ಕಂಡು ಬರುತ್ತದೆ.

'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ

ಎಂದೊದರಿದ ಆ ಮನುವನ್ನು

ಮೃಗವನ್ನು ಹೋಲುವ ನಿಮ್ಮನ್ನು

ದರದರನೆ ಎಳೆದೊಯ್ಯುವೆವು

ಧಗಧಗಿಸುವ ಚಿತೆಯಲಿ ದೂಡುವೆವು"

ಹೀಗೆ ಶತಶತಮಾನಗಳಿಂದ ಸ್ವಾತಂತ್ರ್ಯ ಕಳೆದುಕೊಂಡು, ಬರೀ ಅಡುಗೆ ಮನೆಯ ಜಂತಿ ಎಣಿಸುವುದಕ್ಕೆ ತಮ್ಮ ಓದನ್ನು ಬಳಸಿಕೊಂಡ ಹೆಣ್ಣು ಬದಲಾಗಬೇಕು ಎನ್ನುವ ಸುಕನ್ಯಾ ಮಾರುತಿ ಅವರು ತಮ್ಮ 'ಬಿದ್ದವಳು' ಕವಿತೆಯಲ್ಲಿ ಅಂತಹದೊಂದು ಭಾವನೆ ವ್ಯಕ್ತ ಮಾಡುತ್ತಾರೆ.

"ಕಲಿತ ಅಷ್ಟಿಷ್ಟು ವಿದ್ಯೆಯನ್ನೆಲ್ಲ! ಅಡುಗೆ ಮನೆಯ

ಜಂತಿ ಎಣಿಸುವುದಕ್ಕೆ! ಬಳಸುತ್ತಿದ್ದೇನೆ.

ಅವ ಬಿತ್ತಿದ್ದನ್ನು ನಾ ಬೆಳೆಯುತ್ತ

ಕಾಲ ಕಳೆಯುತ್ತಿದ್ದೇನೆ. ನನ್ನೊಳಗೆ ಎಲ್ಲೋ

ಕಳೆದಿರುವ ನನ್ನ ಹುಡುಕುತ್ತಿದ್ದೇನೆ"

ವ್ಯವಸ್ಥೆಯ ಕ್ರೂರತನಕ್ಕೆ ಹೆಣ್ಣಿನ ವ್ಯಕ್ತಿತ್ವ ಹಾಗೂ ತನ್ನತನ ಅನ್ನುವುದು ಹೇಗೆ ನಾಶವಾಗುತ್ತದೆ ಎನ್ನುವುದನ್ನು ಕವಿತೆ ವ್ಯಕ್ತ ಮಾಡುತ್ತದೆ.

ಮಹಿಳೆ ಆಯಾ ಧರ್ಮದ ಸಂಸ್ಕೃತಿ, ಆಚರಣೆಗಳನ್ನು ಪಾಲಿಸುತ್ತ ಬಂದಿದ್ದಾಳೆ.ಒಂದು ರೀತಿ ಅವುಗಳು ಕೂಡಾ ಅವಳನ್ನು ಶೋಷಣೆ ಮಾಡುತ್ತಾ ಬಂದಿವೆ. ಅಂತಹ ಶೋಷಣೆಗಳನ್ನು ಖಂಡಿಸುತ್ತಾ ಬಂದ ಮಹಿಳಾ ಲೇಖಕಿಯರು ನಮ್ಮಲ್ಲಿದ್ದಾರೆ.ಮುಸ್ಲಿಂ ಮಹಿಳೆಯರ ನಿಲುವುಗಳನ್ನು ಲೇಖಕಿ ಕೆ.ಷರೀಫಾ ತಮ್ಮ 'ಇವರೇ ನನ್ನವರು' ಎನ್ನುವ ಕವಿತೆಯಲ್ಲಿ ತೆರೆದಿಡುತ್ತಾರೆ.

"ಇದು ಬುರ್ಖಾ

ಹಲವಾರು ಶತಶತಮಾನಗಳಿಂದ

ನಾನು ಮರುಮಾತಿಲ್ಲದೆ

ಮೌನವಾಗಿ

ಹೊತ್ತು ಬಂದ ಬುರ್ಖಾ"

ಇಂದಿಗೂ ಈ ಬುರ್ಖಾದಂತ ಸಂಪ್ರದಾಯದಿಂದ ಯಾಕೆ ಹೊರಬರ –ಲಾಗುತ್ತಿಲ್ಲವೆಂದರೆ ಈಗಿನ ನಮ್ಮ ಮಹಿಳೆಯರಿಗೆ 'ಅಕ್ಕ'ನಂತ ಕೆಚ್ಚೆರದ ಕಾರಣ ಎನ್ನುತ್ತಾರೆ, ಡಿ.ಬಿ.ರಜಿಯಾ ತಮ್ಮ 'ಸುಳಿ' ಕವಿತೆಯಲ್ಲಿ.

**"ಅಕ್ಕ..............................**

**ಅಡವಿಟ್ಟಿದ್ದೇವೆ**

**ನಮ್ಮ ಉಸಿರು**

**ಬಸಿರು ನಿಟ್ಟುಸಿರು;**

**ಗೆದ್ದೇವೆ?**

**ನವನಾಗರಿಕತೆಯಲ್ಲಿ**

**ನಮ್ಮ ನಾಳೆಗಳು ಸಾಯುತ್ತಿವೆ.**

**ನಿನ್ನ ಕೆಚ್ಚಿರದೆ"**

ಪುರುಷನ ಗುಲಾಮಗಿರಿಯ 'ಸುಳಿ'ಯಲ್ಲಿ ಸಿಲುಕಿರುವ ಮಹಿಳೆಯ ಭಾವನೆಗಳು ಹೊರಬರದಾಗಿವೆ. ನಮ್ಮ ಉಸಿರು, ಬಸಿರು, ನಿಟ್ಟುಸಿರು ಎಲ್ಲವನ್ನೂ ಅಡವಿಟ್ಟಿದ್ದೇವೆ ಎನ್ನುವಲ್ಲಿ ಸ್ತ್ರೀ ಇನ್ನೂ ಅಧೀನದಲ್ಲಿದ್ದಾಳೆ ಎನ್ನುವುದು ವ್ಯಕ್ತವಾಗುತ್ತಿದೆ.

ಶತಶತಮಾನಗಳಿಂದ ಶೋಷಣೆಗೆ ಒಳಗಾದ ಸ್ತ್ರೀ ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಹೆಣಗಾಡುತ್ತಲೇ ಬಂದಿದ್ದಾಳೆ.ಅವಳಿಗೆ ಸ್ವಾತಂತ್ರ್ಯವೇ ಕನಸಾಗಿ ಉಳಿದಿದೆ.ಹಾಗಾಗಿ ಅವಳ ಬಗೆಗೆ ಯಾರಾದರೂ ಪರಿಚಯ ಕೇಳಿದರೆ.ತನಗೊಂದು ಅಸ್ಮಿತೆ ಇರದ ಆಕೆ ಕೊಡುವ ಉತ್ತರ ಮನಕಲುಕುವಂತದ್ದು, ಅದನ್ನೆ 'ಒಂದು ಪರಿಚಯ' ಎಂಬ ಕವಿತೆಯಲ್ಲಿ ಎಚ್.ಎಸ್. ಮುಕ್ತಾಯಕ್ಕ ಈ ರೀತಿ ಹೇಳುತ್ತಾರೆ.

**"ಗೆಳೆಯ ನೀನು ನನ್ನ ಗುರುತು**

**ಪರಿಚಯ ಕೇಳಿದಿ ಏನೆಂದು ಹೇಳಲಿ?**

**ತಾಯಿ, ಗೆಳತಿ, ಸೂಳೆ, ತಂಗಿ ಏನೆಂದು?**

**ಈ ನಾಡಿನಲ್ಲಿ ನಮಗೆ ಸ್ವಂತ ಅಸ್ತಿತ್ವವೇ ಇಲ್ಲ"**

ಮೇಲಿನ ಇಂತದೆ ಭಾವವೊಂದನ್ನು, ಪ್ರತಿಭಾ ನಂದಕುಮಾರ ಅವರ 'ನಾನು' ಕವಿತೆ ವ್ಯಕ್ತ ಮಾಡುತ್ತದೆ.

**ನಾನೊಬ್ಬನ ಪತ್ನಿ! ಮೂರು ಮಕ್ಕಳ ತಾಯಿ**

**ಇನ್ನೂ ನನ್ನ ಸೀರೆ, ಕುಪ್ಪಸ, ಬಟ್ಟು ಬೈತಲೆಯಲ್ಲ**

**ನನ್ನ ಅತ್ತೆ ಮಾವರ ಮರ್ಜಿ"**

ಮೇಲಿನ ಕವಿತೆಗಳು ಸ್ತ್ರೀ ಅಸ್ತಿತ್ವದ ಹೋರಾಟಕ್ಕೆ ಅಣಿಗೊಳಿಸುತ್ತಾ ಸ್ತ್ರೀ ವಾದದ ಪರವಾಗಿ ಧ್ವನಿಯೆತ್ತುತ್ತವೆ.

ಸಂಪ್ರದಾಯಗಳನ್ನು ಸದಾ ತನ್ನ ಮೇಲೆ ಹೇರುತ್ತ ಬಂದ ತನ್ನ ಅವ್ವ, ಅಕ್ಕನ ನೀತಿ ಪಾಠಗಳ ಬಗ್ಗೆಯೂ ಆಕೆಯಲ್ಲಿ ತಣ್ಣನೆಯ ವಿರೋಧವಿದೆ.ಸಂಪ್ರದಾಯ ಸಾಮಾಜಿಕ ನಡಾವಳಿಗಳನ್ನು ಮೀರಿ ಹೊಸ ಕಲ್ಪನೆ, ಕನಸು, ಭಾವನೆಗಳಿಗಾಗಿ ದಾರಿ ಹುಡುಕುವ ಬಗೆ ನಿಜಕ್ಕೂ ಬಿಡುಗಡೆಯ ಹಂಬಲ ಸೂಚಿಸುವಂತದ್ದು, ಇಂತಹ ಬಿಡುಗಡೆಯ ಹಂಬಲವನ್ನು ಸ.ಉಷಾ ಅವರ 'ಅಮ್ಮನಿಗೆ' ಕವಿತೆಯಲ್ಲಿ ಕಾಣಬಹುದು.

"ನಿನ್ನಮ್ಮ, ಅವಳಮ್ಮ, ಅವಳಮ್ಮ

ಲಗತ್ತಿನಿಂದ ನನ್ನಂಥ ಪಡ್ಡೆಗಳ

ಕಿವಿಯಲ್ಲಿ ಊದಿದ ಪುಂಗಿ ನೀನೂ

ಊದಬೇಡ

ಈಗ ತಾನೆ ಹೆಡೆಯಾಡಿಸುತ್ತಿದ್ದೇನೆ

ಯಾರನ್ನಾದರೂ ಕಚ್ಚಿ ವಿಷವಿಳಿಸಿಕೊಳ್ಳುತ್ತೇನೆ.

ನನಗೆ ದಾರಿ ಬಿಡು.

ನನಗೆ ದಾರಿ ಬಿಡು ನಾನು ನನ್ನದೇ ಆದ ಒಂದು ಹೊಸ ಜಗತ್ತನ್ನು ಸೃಷ್ಟಿಸಿಕೊಳ್ಳುತ್ತೇನೆ ಎಂಬ ಹಂಬಲ ಮೆಚ್ಚುವಂತದ್ದು.

ಶತಶತಮಾನಗಳಿಂದ ಪತಿಯ ಪಾದ ಪೂಜೆ ಮಾಡುತ್ತ ಬಂದ ಗಂಡನ ಎಲ್ಲಾ ಮಾತುಗಳಿಗೆ ಬಸವನ ಹಾಗೆ ತಲೆಯಾಡಿಸುತ್ತಾ ಬಂದ ಸೀತೆಯಂತ ಮಹಿಳೆಯರು ಬದಲಾಗಬೇಕು ಎನ್ನುವ ಕವಯಿತ್ರಿ ವಿಜಯಶ್ರೀ ಸಬರದ ತನ್ನ "ಲಕ್ಷ್ಮಣರೇಖೆ ದಾಟಿದವರು" ಎನ್ನುವ ಕವಿತೆಯಲ್ಲಿ ಅಂತಹದೊಂದು ಕರೆ ಕೊಡುತ್ತಾರೆ.

"ನಾವಿಂದು ಮನುಷ್ಯರಾಗಿದ್ದೇವೆ

ಇಂಚು-ಇಂಚಿಗೆ ಕೊಲ್ಲುವ

ನಿಮ್ಮ ಧರ್ಮ ದೇವರುಗಳನ್ನು ಕಿತ್ತೆಸೆದಿದ್ದೇವೆ

ನಮ್ಮ ಬದುಕನ್ನೇ ನುಂಗಿದ ನಿಮ್ಮ ನೀತಿಗೆ

**ಬೆಂಕಿಯಿಟ್ಟದ್ದೇವೆ**

**ಪಾದ ತೊಳೆದು ಕುಡಿಯೆನ್ನುವ ತೀರ್ಥವನು**

**ನಿಮ್ಮ ಮುಖಕ್ಕೆರಚಿ**

**ಬೆವರು ಸುರಿಸಿ ದುಡಿದು ಬದುಕುತ್ತೇವೆ**

ನಿಮ್ಮ ಹಳೆಯ ಗತ್ತನ್ನೇ

ಮತ್ತೆ ಮುಂದುರೆಸಿದರೆ

ಕೊತ-ಕೊತ ಕುದಿವ ಎಣ್ಣೆಯಾಗುತ್ತೇವೆ

ಧಿಮಿಗುಡುವ ಜ್ವಾಲೆಗಳಾಗುತ್ತೇವೆ.

'ಬೆವರು ಸುರಿಸಿ ದುಡಿದು ಬದುಕುತ್ತೇವೆ' ಎನ್ನುವಲ್ಲಿ ಸ್ತ್ರೀ ಆ ಮೂಲಕ ಮಾತ್ರ ತಾನು ಸ್ವಾತಂತ್ರ್ಯಳಾಗಲು ಸಾಧ್ಯ ಎನ್ನುತ್ತಾರೆ ಕವಯಿತ್ರಿ.

ಅವ್ವ ಹೇಳುತ್ತಿದ್ದ ಎಲ್ಲಾ ಸಂಪ್ರದಾಯದ ಮಾತುಗಳನ್ನು ಕೇಳಿ ಶೋಷಣೆಯನ್ನೇ ವಿರೋಧಿಸದೇ ಗೊಂಬೆಯಂತಾಗಿದ್ದ ಹೆಣ್ಣಿಗೊಂದು ಹೊಸ ನೀತಿ ಹೇಳುವ ಪರಿಯೊಂದನ್ನು 'ತಂಗಿಗೊಂದು ಪತ್ರ' ಕವಿತೆಯಲ್ಲಿ ಕಾಣಬಹುದು.

"ಸೀತೆ ಸಾವಿತ್ರಿಯರಂತೆ ಬದುಕಿ

ಪಂಚ ಪತಿವ್ರತೆಯರ ಸಾಲಿಗೆ ಸೇರೆಂದು

ನಾನು ಹೇಳಲಾರೆ ತಂಗಿ

ನೀನು ಸಾಲಿನಲಿ ನಿಂತು ತಂದ

ಸೀಮೆಎಣ್ಣೆಯ ಸುರವಿ

ನಿನಗೇ ಬೆಂಕಿ ಹಚ್ಚುವ

ಈ ಪತಿರಾಯಗೊಂದಿಷ್ಟು ಬುದ್ಧಿ ಕಲಿಸಲು

ನೀನು ಮಹಾಕಾಳಿಯಾಗಬೇಕವ್ವ"

ಈ ಕವಿತೆ ಇಪ್ಪತ್ತೊಂದನೆಯ ಶತಮಾನದ ಹೆಣ್ಣು ಬದಲಾಗಬೇಕಾದ ಅನಿವಾರ್ಯತೆಯನ್ನು ಸಾರಿ ಹೇಳುತ್ತದೆ.

ಕೊನೆಯದಾಗಿ ಶಶಿಕಲಾ ವೀರಯ್ಯಸ್ವಾಮಿ ಅವರ 'ಒಂದು ಹೇಳಿಕೆ' ಕವಿತೆ ಹೆಣ್ಣು ತಳೆಯಬೇಕಾದ ಹೊಸ ಮಾರ್ಗಗಳನ್ನು ತೆರೆದಿಡುತ್ತದೆ.

"ಸುಡ್ರಿ, ಸುಡ್ರಿ, ಇನ್ನ ನಾವು ಸುಟ್ಟ

ಕಟಿಗ್ಯಾಗಿ ಬೂದ್ಯಾಗಿ ಉದರಂಗಿಲ್ಲಾ

ಸುಟ್ಟಷ್ಟು ಕಸುವಾಕ್ಕೇವು

ಕೊಡ್ಲಿ ಅಕ್ಕೇವು ಕುಡುಗೋಲ ಅಕ್ಕೇವು"

ಎನ್ನುವಲ್ಲಿ ಸ್ತ್ರೀ ನೋವು, ನರಳಾಟಗಳಿಗೆ ಆತ್ಮಹತ್ಯೆಯ ಮಾರ್ಗವನ್ನು ಕಂಡುಕೊಳ್ಳಬಾರದು.ಬದಲಾಗಿ ಚಂಡಿ ಚಾಮುಂಡಿಯಾಗಬೇಕು.ಆವಾಗಲೇ ತನ್ನ ಆತ್ಮರಕ್ಷಣೆ ಸಾಧ್ಯ ಎನ್ನುತ್ತದೆ ಕವಿತೆ.

ಈ ರೀತಿ ನಿರಂತರವಾಗಿ ಮಹಿಳಾ ಪರವಾದ ವಾದ, ಹೋರಾಟ, ಬಂಡಾಯಗಳು ನಡೆಯುತ್ತಾ ಬಂದಿದ್ದರೂ ಜಡ್ಡುಗಟ್ಟಿರುವ ಪುರುಷ ಸಮಾಜವನ್ನು ಅದರ ಕ್ರೂರತನದಿಂದ ಹೊರತರಲು ಸಾಧ್ಯವಾಗಿಲ್ಲ. ಹಾಗೆಯೇ ಕ್ರೌರ್ಯ, ದಬ್ಬಾಳಿಕೆ, ವರದಕ್ಷಿಣಾ ಕಿರುಕುಳ, ಅತ್ಯಾಚಾರ, ಭ್ರೂಣಹತ್ಯಾ ಹಾಗೂ ಮರ್ಯಾದ ಹತ್ಯಾಗಳಂತ ಹೀನ ಕೃತ್ಯಗಳನ್ನು ಪುರುಷ ಸಮಾಜ ಬಿಡಲು ತಯಾರಿಲ್ಲ. ಎಲ್ಲಿಯವರೆಗೂ ಪುರುಷ ಸಮಾಜ ಈ ವಿಷ ವರ್ತುಲಗಳನ್ನು ದಾಟಿ ಹೊರ ಬರುವುದಿಲ್ಲವೋ, ಹೆಣ್ಣನ್ನು ತನ್ನ ಸರಿಸಮಾನಳು ಎಂದು ಪರಿಗಣಿಸುವುದಿಲ್ಲವೋ ಅಲ್ಲಿಯವರೆಗೂ ಈ ದೇಶದ ಸಂಸ್ಕೃತಿ ಹೊರಜಗತ್ತಿಗೆ ತನ್ನನ್ನು ತಾನು ಪರಿಚಯಸಿಕೊಳ್ಳಲು ಸಾಧ್ಯವಾಗುವುದಿಲ್ಲ.

ಇಷ್ಟೆಲ್ಲಾ ಸ್ತ್ರೀವಾದದ ನಂತರವೂ ಕರ್ನಾಟಕದಲ್ಲಿ ಕಳೆದ ನಾಲ್ಕೈದು ವರ್ಷಗಳಲ್ಲಿ ನಡೆದ ಘಟನೆಗಳು ನಮ್ಮನ್ನು ತಬ್ಬಿಬ್ಬುಗೊಳಿಸುತ್ತವೆ.

2012ರಲ್ಲಿ 24 ಸಾವಿರ ಹೆಣ್ಣು ಮಕ್ಕಳು ನಾಪತ್ತೆಯಾಗಿದ್ದಾರೆ.

ಈ ನಾಡಿನಲ್ಲಿ ಹತ್ತು ಲಕ್ಷ ಹೆಣ್ಣು ಮಕ್ಕಳು ಹುಟ್ಟುವುದಕ್ಕಿಂತ ಮೊದಲೇ ಕಣ್ಮರೆಯಾಗುತ್ತಿದ್ದಾರೆ.

ಕಳೆದ ಎರಡು–ಮೂರು ತಿಂಗಳಲ್ಲಿ ನಡೆದ ಅತ್ಯಾಚಾರ ಪ್ರಕರಣಗಳಿಗೆ ಲೆಕ್ಕವಿಲ್ಲ.

ಇತ್ತೀಚೆಗೆ ಮಂಡ್ಯದಲ್ಲಿ ತಳಸಮುದಾಯದ ಹೆಣ್ಣು ಮಗಳು ಮೇಲ್ವರ್ಗದ ಹುಡುಗನನ್ನು ಮದುವೆಯಾಗಿದ್ದಕ್ಕೆ 'ಮರ್ಯಾದಾಹತ್ಯಾ' ನೆಪದಲ್ಲಿ, ಹುಡುಗನ ಕಡೆಯವರು ಆ ಹೆಣ್ಣು ಮಗಳನ್ನು ಬೆಂಕಿ ಹಚ್ಚಿ ಸುಟ್ಟಿದ್ದು ನಾಡೇ ತಲೆತಗ್ಗಿಸುವ ನೀಚ ಕೃತ್ಯ.

ಹೀಗೆ ಇಂತಹ ಪಟ್ಟಿ ಇನ್ನೂ ಬೆಳೆಯುತ್ತಾ ಹೋಗುತ್ತದೆ.ಈ ಹಿನ್ನೆಲೆಯಲ್ಲಿ ಸ್ತ್ರೀ ಪರವಾದ ವಾದಗಳು, ಹೋರಾಟಗಳು ಇನ್ನೂ ಹೆಚ್ಚು ಪ್ರಬಲವಾಗಬೇಕಿದೆ.ಸ್ತ್ರೀವಾದ ಎಂದಾಕ್ಷಣ ಅದು ಸ್ತ್ರೀಯರೇ ಮಂಡಿಸಬೇಕೆಂದು ಅಲ್ಲ. ಅದಕ್ಕೆ ಶಕ್ತಿ ಬರುವುದು ಪುರುಷರು ಕೂಡ ಸ್ತ್ರೀವಾದದ ಜೊತೆಗೆ ಕೈ ಜೋಡಿಸಿದಾಗ.ಸ್ತ್ರೀವಾದದ ನಿಲುವುಗಳನ್ನು ನಾವು ಲೇಖಕರಲ್ಲೂ ಗಮನಿಸಬಹುದು. ಉದಾ: ಅಲ್ಲಮ ಪ್ರಭುವಿನ **"ಹೆಣ್ಣು ಮಾಯೆಯೆಂಬರು, ಹೆಣ್ಣು ಮಾಯೆಯಲ್ಲ, ಮನದ ಮುಂದಣ ಆಸೆಯೇ ಮಾಯೆ ಕಾಣಾ ಗುಹೇಶ್ವರಾ"!** ಎನ್ನುವಲ್ಲಿ ಸ್ತ್ರೀವಾದದ ನಿಲುವಿದೆ.

ಆಧುನಿಕತೆಯಲ್ಲೂ ಕುವೆಂಪು, ಬೇಂದ್ರೆ, ಕಾರಂತ, ಕೆ.ಎಸ್. ನರಸಿಂಹಸ್ವಾಮಿ ಹಾಗೂ ದಲಿತ–ಬಂಡಾಯ ಲೇಖಕರಲ್ಲಿ ಮಹಿಳಾ ವಾದವನ್ನು ಗುರುತಿಸಬಹುದು.

**ಪರಾಮರ್ಶನ ಗ್ರಂಥಗಳು**


1. ಅನಾಥ ಪಕ್ಷಿಯ ಕಲರವ, ವೀರಭದ್ರಪ್ಪ ಲೋಹಿಯಾ ಪ್ರಕಾಶನ 1997.
2. ಬರೀ ಕಥೆಯಲ್ಲೋ ಅಣ್ಣಾ, ಕುಂ.ವೀರಭದ್ರಪ್ಪ ಸಿ.ವಿ.ಜಿ ಪಬ್ಲಿಕೇಷನ್ ಬೆಂಗಳೂರು 2004
3. ಹೊಸಗನ್ನಡ ಸಾಹಿತ್ಯ ಚರಿತ್ರೆ ಶೇಷಗಿರಿರಾವ್ ಎಲ್.ಎಸ್. ಅಂಕಿತಾ ಪ್ರಕಾಶನ ಬೆಂಗಳೂರು 2002.